1 P.M.

ಶ್ರೀ ಎಸ್ ಗೋಪಾಲಗೌಡ.—ಮಲೆನಾಡು ನಂಬಂದವಾಗಿ ಏನಾದರೂ ಇದರಲ್ಲಿ ಸೇರಿಸಿದ್ದೀರಾ?

Dr. R. NAGAN GOWDA.—We have got about 9,000 acres and we will certainly include the malnad areas where it may be needed.

ಶ್ರೀ ಎಸ್. ಗೋಪಾಲಗೌಡ.—ಏತಕ್ಕೆಂದರೆ ಅಲ್ಲಿ ಮಳೆ ಹೆಚ್ಚಾಗಿ ಬೀಳುತ್ತಿರುವುದರಿಂದ ಭೂಮಿಯುಲ್ಲಿದ್ದ ಸಾರವೆಲ್ಲಾ ಕೊಚ್ಚಿಹೋಗಿರುತ್ತದೆ ಎನ್ನುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿಯೇ?

Dr. R. NAGAN GOWDA.—That is true. It is a very important problem. *Soil conservation* will have to be taken up by this Board and this is now engaging the attention of the Board.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯದಲ್ಲಿ ವ್ಯವಸಾಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರತಕ್ಕಂಥ ಆ ಬೋರ್ಡು ಈ ಭೂಮಿಯ ಸಾರವನ್ನು ಪರೀಕ್ಷೆ ಮಾಡತಕ್ಕ ಸಂಬಂಧದಲ್ಲಿ ಆಯಾ ಪ್ರದೇಶಗಳಿಗೇ ಹೋಗಿ ಖುದ್ದಾಗಿ ನೋಡಿ ಮಾಡುತ್ತಾರೋ ಅಥವಾ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಂದ ವರದಿಗಳನ್ನು ತರಿಸಿಕೊಂಡು, ಅವುಗಳ ಆಧಾರದಮೇಲೆ ಇದನ್ನು ಕಂಡು ಹಿಡಿಯುತ್ತಾರೋ?

Dr. R. NAGAN GOWDA.—The problem is very well known. Whether in malnad area or in dry area, all that is necessary for us is to work out schemes by which we could tackle these problems. It is not necessary for any of us to go round, because we are seeing it almost every day and the members of this Committee are well acquainted with the problems in terms of soil conservation.

QUESTION FOR ANSWER ON THE DAY.

(But not taken up.)

Power for Pumps in Bagepalli and Gudibanda Taluks.

Q.—284. Sri B. V. NARAYANA REDDY (Bagepalli-Gudibanda).—

Will the Government be pleased to state:—

(*a*) whether they have given any power for lift irrigation in Bagepalli and Gudibanda taluks in the year 1954-55; if not given, the reasons therefor;

(*b*) how many applications were received and how many sanctioned?

A.—Dr. R. NAGAN GOWDA (Minister for Agriculture).—

(*a*) Yes.

(*b*)—

	No of applications received during the year.	No. of applications sanctioned during the year (including applications made in previous years).
Bagepalli Taluk	66.	13
Gudibanda ,,	8.	19

BUSINESS OF THE HOUSE.

Mr. SPEAKER.—Before discussion on the Budget is resumed, I want to bring this fact to the notice of the Hon'ble Members. It becomes very necessary, though it is not a pleasant task for me, to restrict the time at least from to-day because, if we continue the debate till 6 o'clock to-day and to-morrow, we have got only 9 hours at our disposal. The Treasury Bench will take at least two hours for reply. Therefore only seven hours are left at the disposal of the Hon'ble Members. I seek the help of the House at this juncture guide at least in rationing out the time. I invite proposals from the Hon'ble Members.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಈಗ ಗೊತ್ತುಮಾಡಿರುವ ಈ ಸಭೆಯ ಕಾರ್ಯಕಲಾಪಗಳು ಈ ದಿವಸ ಮತ್ತು ನಾಳೆ ಎರಡು ದಿವಸಗಳೂ ಸಾಯಂಕಾಲ ಆರು ಘಂಟೆಯವರೆಗೂ ನಡೆಯಬೇಕೆಂದಿದೆ. ಇದನ್ನೂ ಈಗ ಬದಲಾವಣೆ ಮಾಡಿ ಸಾಯಂಕಾಲ ಏಳು ಘಂಟೆಯವರೆಗೂ ಸಭೆ ನಡೆಯುವಂತೆ ಮಾಡಿದರೆ ಅನುಕೂಲವಾಗಿರುತ್ತದೆಂದು ನಾನು ಸೂಚಿಸುತ್ತೇನೆ.

Mr. SPEAKER.—I have no objection if Hon'ble Members are prepared to sit till seven or eight. I leave it to the House. I want to know the sense of the House.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಈ ಸಭೆಯನ್ನು ಏಳು ಘಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ಆಗ ಮಂತ್ರಿಗಳು ಉತ್ತರಕೊಡತಕ್ಕ ಬಗ್ಗೆ ಎರಡು ಘಂಟೆಗಳನ್ನು ಬಿಟ್ಟು ಬಿಟ್ಟರೆ ಸದಸ್ಯರುಗಳಿಗೆ ಮಾತನಾಡಲು ಒಂಭತ್ತು ಘಂಟೆಗಳ ಕಾಲಾವಕಾಶ ಸಿಕ್ಕಿದಂತಾಗುತ್ತದೆ. ಆಗ ತಾವು ಪ್ರತಿಯೊಬ್ಬ ಸದಸ್ಯರಿಗೂ ಹದಿನೈದು ನಿಮಿಷಗಳಂತೆ ಕಾಲವನ್ನು ನಿರ್ಧರಗೊಳಿಸಿದರೆ ಸಾಕು.

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಹಾಗೂ ಸದಸ್ಯರಿಂದ ಅಂಥ ವಿಶೇಷ ಸಂದರ್ಭದ ಪ್ರಾರ್ಥನೆಗಳೇನಾದರೂ ಬಂದರೆ ಆ ಅವಧಿಯನ್ನು ಇನ್ನೂ ಐದು ನಿಮಿಷ ಹೆಚ್ಚಿಸಿದರೆ ಸಾಕಾಗಬಹುದೆಂದು ನಾನು ಸೂಚಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ತಾವು ಈ ಬಡ್ಜೆಟ್ ಮೇಲಿನ ಭಾಷಣಗಳಿಗೆ ಸೋಮವಾರದ ವರೆಗೂ ಕಾಲಾವಕಾಶ ಕೊಡಬೇಕು. ನಾವು ಇಲ್ಲಿ ಒಂದೇ ಸಮನಾಗಿ ಆರು-ಏಳು ಘಂಟೆಗಳವರೆಗೆ ಕುಳಿತರೆ ನಮ್ಮ ಆರೋಗ್ಯ ಕೆಡುತ್ತದೆ. ಆದ್ದರಿಂದ ಇದನ್ನು ಸೋಮವಾರದವರೆಗೂ ಮುಂದುವರಿಸ ಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಈ ದಿವಸ ನಮ್ಮ ಕಾಂಗ್ರೆಸ್ ವಸ್ತುಪದರ್ಶನದ ಪ್ರಾರಂಭೋತ್ಸವವು ಕೊಡಗಿನ ಮುಖ್ಯಮಂತ್ರಿಗಳಿಂದ ನಡೆಸಲ್ಪಡುತ್ತದೆ. ಆಗ್ಗೆ ನಾವೆಲ್ಲರೂ ಅಲ್ಲಿ ಹಾಜರಿರ ಬೇಕು. ಆದ್ದರಿಂದ ಈ ದಿವಸ ಈ ಸಭೆಯನ್ನು ಸಾಯಂಕಾಲ ಐದಕ್ಕೆ ಮುಗಿಸಬೇಕೆಂದು ಹೇಳುತ್ತೇನೆ. ನಾಳೆ ಬೇಕಾದರೆ ಈ ಸಭೆಯನ್ನು ಸಾಯಂಕಾಲ ಏಳು ಘಂಟೆಯವರೆಗೂ ತಾವು ನಡೆಸಬಹುದೆಂದು ಹೇಳುತ್ತೇನೆ.

Mr. SPEAKER.—There will be no time at the disposal of the Hon'ble Members It is for the benefit of the Hon'ble Members I am seeking their advice.

ಶ್ರೀ ಮಾಧವಾಚಾರ್.—ಪ್ರತಿಯೊಬ್ಬ ಸದಸ್ಯರಿಗೂ ಹದಿನೈದು ನಿಮಿಷಗಳವರೆಗೆ ಕಾಲ ನಿರ್ಧರ ಮಾಡಿದರೆ ಒಳ್ಳೆಯದು.

Sri M. PALANIYAPPAN (Ulsoor).—Such of those members as have not spoken on the Rajapramukh's Address may be given preference.

ಶ್ರೀ ಆರ್. ಅನಂತರಾಮನ್ (ಚಾಮರಾಜ ಪೇಟೆ).—ನಾವು ಸಾಯಂಕಾಲ ಐದು ಘಂಟೆಗೆ ಎದ್ದು, ರಾತ್ರಿ ಸೆಷ್ಷ ಬೇಕಾದರೂ ತಾವು ಮಾಡಬಹುದು.

Sri J. MOHAMED IMAM (Jagalur).—I have got one suggestion. I think if all the members agree, we can meet in the morning to-morrow from 8-30 to 11-30 and then with some interval we can meet at 12-30 or 1 and go on till 6.

Regarding time-limit, I would suggest that it is fixed at the minimum of half an hour, subject to discretion being given to the Chair to extend the time if any speech brings out points of outstanding importance.

Mr. SPEAKER.—We cannot fix the time at half an hour for each member but only 15 to 20 minutes, because there are so many members willing to speak.

Sri J. MOHAMED IMAM.—If the time is wanting, I would suggest that Budget discussion may be continued on Saturday also in the morning session and the business fixed for that day according to the programme may be taken up in the afternoon of that day. So to-morrow we may sit both in the morning and afternoon and again on Saturday morning for continuing the discussion on the Budget.

Mr. SPEAKER.—So far as Saturday is concerned, it will be according to the schedule that is fixed.

Sri J. MOHAMED IMAM.—On Saturday also we can have two sittings—in the morning for Budget discussion and in the afternoon for the work according to the schedule.

Mr. SPEAKER.—The Government also must agree. The whole Secretariat also must work.

Sri J. MOHAMED IMAM.—I am placing this proposal in view of the very limited time at our disposal. I have been pressing even in the previous years that the time allotted for Budget discussion is very inadequate and I was suggesting that at least 5 days must be set apart. It so happens that only three days are set apart during this session. So, to make it up, we have no objection to overwork, sitting both morning and afternoon to-morrow and on Saturday morning also and we can take up regular business included in the agenda on Saturday afternoon.

Sri K. HANUMANTHAIYA (Leader of the House).—I have already made it clear. It is not in consonance with the traditions to raise these points again and again. I have once for all said that any adjustment or re-adjustment has to take place by mutual discussion with you. I am not happy to see that these off-hand suggestions are being made every day at every hour.

Sri J. MOHAMED IMAM.—I may be permitted to state that these are contingencies which can never be foreseen and it is not the mistake of the members and I have been representing on behalf of all the members that the time allotted for Budget discussion is very inadequate.

Sri K. HANUMANTHAIYA.—This is another inaccuracy that he is taking the responsibility of representing all the members.

Sri J. MOHAMED IMAM.—If not all the members, at least most of the members.

Mr. SPEAKER.—So far as to-morrow is concerned, in consultation with the Leader of the House, we can meet to-morrow morning and afternoon also, but the Budget discussion will not continue on Saturday morning because it will be most inconvenient.

Misreporting of Proceedings by a Daily.

Sri H. SIDDAVEERAPPA (Minister for Home and Industries).—Before the discussion on the Budget commences to-day, I wanted to bring to your kind notice about the mis-reporting in a Paper about yesterday's proceedings. "Deccan Herald" on 10th March 1955 has quoted like this in its comments under what is called "By Our Galleryman":

> "Minister H. Siddaveerappa: The total Central deficit is Rs. 340 crores, Sir!
>
> Mr. Imam raised his voice to expose the Minister's ignorance and begged him not to confuse the overall deficit with the actual for the budget year."

* * *

I just wanted to bring to your kind notice about the budget speech of the Finance Minister of the Government of India. I have got the original with me. There in para 51 in Part B it is stated like this:

> "I made mention earlier that the deficit on revenue account in the coming year was estimated at 30·17 crores and the overall deficit at 340 crores."

What is reported by your official Reporter is also to this effect:

> "Sri H. Siddaveerappa.—The real deficit of the Central Budget is in the order of Rs. 340 crores.
>
> "Sri J. Mohamed Imam.—That is for the current year and not for the next year. The Central Government have got huge resources. That is for the current year which has to be seen, but for the year 1955-56 it is only Rs. 30 crores."

The point involved is this. There is a deliberate statement made by this Paper with a view to ridicule a member of this House, stating that the Member exhibited his ignorance on the floor of the House. I don't claim to know everything, but this much I know, when I made this statement on the floor of this House, I had read the speech, I knew what was contained in the speech of the Hon'ble the Finance Minister of the Government of India. What was stated by me was not different from what is stated here. That statement is made by that Paper with a deliberate design to ridicule the Treasury Bench. What is more, this is not the first time—I am prompted to infer this from what this Paper once reported about my not knowing an English word. This Paper took the role of an English Professor and said I do not know how to pronounce a particular word when I used that word on another occasion 'adventitious'. I have not here with me as to how to pronounce that word. I pronounced it correctly and that Paper went on stating I do not know how to pronounce that word and assumed the role of an English Professor. I feel it is a deliberate design tried persistently not only to ridicule members of the Treasury Bench, but even you, Sir, do not seem to be outside the orbit of this Paper. I bring to your notice with all humility what was reported in the issue of this Paper dated 8th March 1955: 'By Our Galleryman' under the heading "*Speaker ignores 'substance'.*" This is what the Paper writes.

> "The Speaker, who took only seven minutes to read out his prepared ruling, was in such great hurry that he pronounced the word "presented" as "pregented," opinion as "opnion" and "prima facie" as "prima fashia." Nevertheless, the substance was unaffected."

I may humbly bring to your notice the guidance given by our Parliament in this small pamphlet—"Privileges of the House"—a few points for the guidance of the Press representatives visiting the Parliament House. With

(SRI H. SIDDAVEERAPPA.)

regard to the Speaker in page 14 it has been held :

"The Press must know that no suggestion of partiality, however remote it may be, against the Chair will be tolerated. The Speaker must guard and maintain his reputation. . . ."

It is further said :

"He should not allow insinuations to pass unnoticed."

We hold you, in the seat you occupy, with the highest respect, we hold you in great honour. It is not right on the part of a Press to—may I use the word—abuse the privilege and then begin to attack either members of this House or the Chair.

I have brought this to your notice for such consideration as you deem fit.

MR. SPEAKER.—Yes, it will be taken up to-morrow.

BUDGET FOR 1955-56—GENERAL DISCUSSION

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ). ಸ್ವಾಮಿ, ಮುಖ್ಯಮಂತ್ರಿಗಳು 1955-56 ನೆಯ ಸಾಲಿನ ಬಜೆಟ್ ಅಂದಾಜನ್ನು ನಮ್ಮ ಮುಂದೆ ಅನುಮತಿಯ ಬಗ್ಗೆ ಇಟ್ಟಿದ್ದಾರೆ. ಇದನ್ನು ಸ್ವಾಗತಿಸಲು ಬಹಳ ಹರ್ಷವಾಗುತ್ತದೆ. ಏಕೆಂದರೆ, ಸಂಸ್ಥಾನದಲ್ಲಿ ಜನ ಜೀವನದಲ್ಲಿ ಎಲ್ಲ ವಿಧವಾದ ಏಳಿಗೆಯೂ ಆಗಬೇಕೆಂಬ ದೃಷ್ಟಿಯಿಂದ ಅನೇಕ ಉಪಯುಕ್ತ ಯೋಜನೆಗಳಿಗೆ ಹಣವನ್ನೊದಗಿಸಿದ್ದಾರೆ. ಖೋತಾ ಬಜೆಟ್ ಎಂಬ ಟೀಕೆ ಬರಬಹುದಾದರೂ ಅದನ್ನು ಲೆಕ್ಕಿಸದೆ ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ಹಣವನ್ನೊದಗಿಸಲು ಈ ಬಜೆಟ್ಟಿನಲ್ಲಿ ಪ್ರಯತ್ನಪಟ್ಟಿದ್ದಾರೆ. ಯಾರಿಗೂ ಈ ಬಜೆಟ್ಟು ಗಾಬರಿ ಅಥವಾ ಅಸಮಾಧಾನವನ್ನುಂಟು ಮಾಡತಕ್ಕದ್ದಲ್ಲ. ಏಕೆಂದರೆ, ಅಂಥ ವಿಶೇಷವಾದ ತೆರಿಗೆಯ ಹೊರೆಯನ್ನು ಜನರ ಮೇಲೆ ಹೊರಿಸುವಂತೆ ಮುಖ್ಯಮಂತ್ರಿಗಳು ಮಾಡಿಲ್ಲ. ನಮ್ಮ ದೇಶದಲ್ಲಿ ಜನಜೀವನದಮಟ್ಟ ಹೆಚ್ಚಾಗಿ, ಹೇಶದ ಸಂಪತ್ತು ಹೆಚ್ಚಾಗಬೇಕಾದರೆ, ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗುತ್ತದೆ. ಇಂಥ ಸಮಯದಲ್ಲಿ ಇನ್ನೂ ಹೆಚ್ಚು ತೆರಿಗೆಗಳನ್ನು ಕೊಡಲು ಶಕ್ತಿಯಿರುವವರ ಮೇಲೆ ಹಾಕುವುದಕ್ಕೆ ಸಾಧ್ಯ. ಆದರೆ ಇಂಥ ಯಾವ ಕಾರ್ಯಕ್ಕೂ ಕೈಹಾಕದೆ, ಕಾಫಿ ಮುಂತಾದ ಬೆಳೆಗಳ ವಿಷಯದಲ್ಲಿ, ಅದರಲ್ಲಿಯೂ ಆದಾಯ ಹೆಚ್ಚಾಗಿರುವ ಸಂದರ್ಭದಲ್ಲಿ ಮಾತ್ರ ಸ್ವಲ್ಪ ತೆರಿಗೆಯನ್ನು ಹಾಕಿದ್ದಾರೆಯೇ ವಿನಾ ಇನ್ನಾವುದೂ ಇಲ್ಲ. ಇದು ಶ್ಲಾಘನೀಯವಾದುದು. ನಾವು ಈ ಹೊತ್ತು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸೊಸೈಟಿಯ ಧ್ಯೇಯವನ್ನು ಸ್ವೀಕರಿಸಿದ್ದೇವೆ. ಇದನ್ನು ಸ್ವೀಕರಿಸಿ ನಮ್ಮ ದೇಶದ ರಚನೆಯನ್ನು ಸ್ವಲ್ಪ ಪುನಃ ಮಾಡೋಣವೆಂದು ಹೇಳುವಾಗ, ಇದನ್ನು ಮಾಡುವಾಗ ಅನೇಕ ಜವಾಬ್ದಾರಿಗಳು ಸರ್ಕಾರದಮೇಲೆ ಬೀಳುತ್ತವೆ. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಯಾವರೀತಿ ಸ್ವಜೆ ತಾಯಿಗರ್ಭದಿಂದ ಭೂಮಿಗೆ ಬಿದ್ದಕಾಲದಿಂದ ಅವನು ಮಣಣದ ಕಡೆ ಹೋಗುವವರೆಗೂ ಸರ್ಕಾರ ಅವನ ಯೋಗ ಕ್ಷೇಮವನ್ನು ನೋಡಿಕೊಳ್ಳಬೇಕೆಂದು ಒತ್ತಾಯ ಹಾಕುವುದನ್ನು ನೋಡುತ್ತಿದ್ದೇವೆ. ಹೀಗಿರುವಾಗ, ಜನತೆಯ ಅವಶ್ಯಕತೆಗಳನ್ನು ಒಂದೊಂದಾಗಿ ಪೂರೈಸಿಕೊಂಡು ಬರಬೇಕಾದರೆ ಹಣಬೇಕು, ಇದಕ್ಕಾಗಿ ಇನ್ನೂ ಹೆಚ್ಚಿನ ಹೊರೆಯನ್ನು ಹೊರಜೇಕಾದುದು ಪವಿತ್ರ ಕರ್ತವ್ಯ. ಆದುದರಿಂದ ಸರ್ಕಾರ ಒಂದೆರಡು ತೆರಿಗೆಗಳನ್ನು ಹಾಕಿದ ಮಾತ್ರಕ್ಕೇ ಟೀಕಿಸುವುದು ಎಳ್ಳಷ್ಟೂ ಸೂಕ್ತವಲ್ಲವೆಂದು ತಿಳಿದುಕೊಂಡಿದ್ದೇನೆ. ಇನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯ ಪೂರೈಕೆಗೆ 14·55 ಕೋಟಿ ರೂಪಾಯಿ ಮುಂದಿನ ಸಾಲಿನಲ್ಲಿ ವೆಚ್ಚವಾಗಬೇಕಾಗಿದೆ, ಇದಕ್ಕೂ ಈ ಬಜೆಟ್ಟಿನಲ್ಲಿ ಒದಗಿಸಿದ್ದಾರೆ. ಅಂದಮೇಲೆ 4·09ಕೋಟಿ ರೂಪಾಯಿ ಕೊರತೆ ಬಂದಿತೆಂದರೆ ಇದೇನೂ ದೊಡ್ಡದಲ್ಲ. ದೇಶ ಅಭಿವೃದ್ಧಿ ಹೊಂದುವಾಗ ಖೋತಾ ಬಜೆಟ್ ಆಗಲೇಬೇಕು. ನಮ್ಮ ಗುರಿ ಸಾಧನೆಯಾಗುವವರೆಗೆ ಹೀಗಿರುತ್ತದೆ; ಆಮೇಲೆ ಸರಿಹೋಗುತ್ತದೆ. ಆದುದರಿಂದ ಯಾರೂ ಇದಕ್ಕೆ ಹೆದರಬೇಕಾಗಿಲ್ಲ. ಈ ಬಜೆಟ್ ವಿಷಯದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಮಾಡುವುದಕ್ಕೆ ಸಾಕಷ್ಟು ಕಾಲವಿಲ್ಲದೇಯಿರುವುದರಿಂದ, ಕೆಲವು ವಿಷಯಗಳನ್ನೂ ಕುಂದುಕೊರತೆಗಳನ್ನೂ ಸಭೆಯ ಗಮನಕ್ಕೆ ತರಲಷ್ಟೆ ಪಡುತ್ತೇನೆ.

ವಿದ್ಯಾ ಸುಧಾರಣೆಯನ್ನು ಬಹಳ ಯಶಸ್ವಿಯಾಗಿ ಒಂದು ಪವಿತ್ರ ದಿನದಂದು ಪ್ರಾರಂಭಮಾಡಿದ್ದಾರೆ. ಹೀಗೆ ಮಾಡುವಾಗ ತುಂಬ ಎಚ್ಚರಿಕೆ ತೆಗೆದುಕೊಳ್ಳಬೇಕಾಗುತ್ತದೆ. ಪಠ್ಯಪುಸ್ತಕಗಳೇ ಬಂದಿಲ್ಲವೆಂದು ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ಎರಡು ಮೂರು ವರ್ಷಗಳಿಂದ ಪಠ್ಯಪುಸ್ತಕಗಳ ಕೊರತೆ ಕೇಳಿ ಬರುತ್ತಿದೆ. ಇದನ್ನು ಜಾಗ್ರತೆ ಪರಿಹರಿಸುವುದು ಅಗತ್ಯ. ರೂರಲ್ ಡೆವಲಪ್‌ಮೆಂಟ್‌ನಲ್ಲಿ ಬಹಳ ಕೆಲಸ ಆಗಬೇಕಾಗಿದೆ. ಕೆಲವು ಹಳ್ಳಿಗಳಲ್ಲಿ ರಸ್ತೆಗಳು ಕೊಚ್ಚೆ ನೀಯ ಪರಿಸ್ಥಿತಿಯಲ್ಲಿವೆ. ಭದ್ರಾವತಿ ತಾಲ್ಲೂಕಿನ ಉದಾಹರಣೆ ಹೇಳುವುದಾದರೆ, ನಾವಿರಾರು ಜನರು ವಾಸವಾಗಿರುವ ಆನವೇರಿ ಮೊದಲಾದ ಹಳ್ಳಿಗಳಲ್ಲಿ ಕೇವಲ ಒಂದೆರಡು ಬಾವಿಗಳಿವೆ. ಆ ನೀರು ಉಪ್ಪು ನೀರಾದ್ದರಿಂದ ನದಿಯ ನೀರನ್ನು ಪಯೋಗಿಸಬೇಕಾಗುತ್ತದೆ. ಆದಕಾರಣ ನದಿಗೆ ಪೆಟ್ಟಲು ಕಟ್ಟಿಸದಿದ್ದರೆ ಬಹಳ ಅನಾಹುತವಾಗುತ್ತದೆ, ಈಗಾಗಲೇ ಆಗುತ್ತಿದೆ. ಇಂಥ ಕೆಲಸಗಳನ್ನು ರೂರಲ್ ಡೆವಲಪ್ ಫಂಡ್‌ನಿಂದ ಮಾಡಿಸಿಕೊಡಬೇಕು.

ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಅನೇಕ ಕೆಲಸಗಳನ್ನು ಸೇರಿಸಬಹುದು. ಯಾವ ಯಾವ ಕೆಲಸಗಳನ್ನು ಸೇರಿಸಬಹುದು, ಯಾವುದು ಅಗತ್ಯ ಯಾವುದು ನಿಧಾನವಾಗಿ ಮಾಡಬಹುದಾದದು ಎಂಬುದನ್ನು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೆ ಅನುಕೂಲವಾಗುವಂತೆ ಈ ಸಭೆಯ ಸದಸ್ಯರು ಸೇರಿ ಚರ್ಚೆನಡೆಸುವುದಕ್ಕೆ ಅವಕಾಶ ಮಾಡಿದರೆ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಲೆನಾಡಿಗೆ ವಿಶೇಷ ಗಮನ ಕೊಡಬೇಕು. ಏಕೆಂದರೆ, ಅದರ